## ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ 1096/2020

ಪಿಡಬ್ಲ್ಯುಃ - 3
ಸಿಡಬ್ಲುಃ - 3

ದಿನಾಂಕಃ **12.09.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ರಾಜೇಶ್ ಎಂ. ಎನ್. |
| ತಂದೆಯ ಹೆಸರು | - ನಾರಾಯಣ |
| ವಯಸ್ಸು | - 30 ವರ್ಷ |
| ವೃತ್ತಿ | - ಕೂಲಿ ಕೆಲಸ |
| ವಾಸಸ್ಥಳ | - ಹಾಕತ್ತೂರು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-1, 2 ಮತ್ತು 4 ಗೊತ್ತು. ದಿಃ 07.08.2020 ರಂದು ಪೊಲೀಸರು ಹಾಕತ್ತೂರು ಗ್ರಾಮಕ್ಕೆ ಬಂದಿದ್ದರು. ಚಾಸಾ-1 ರವರಿಗೆ ಮತ್ತು ಆರೋಪಿತರಿಗೆ ಗಲಾಟೆಯಾದ ವಿಚಾರವಾಗಿ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿ ನನ್ನ ಒಂದು ಸಹಿ ಪಡೆದಿದ್ದಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-4 ರವರು ಇದ್ದರು. ಘಟನಾ ಸ್ಥಳವನ್ನು ಚಾಸಾ-2 ರವರ ತೋರಿಸಿಕೊಟ್ಟಿದ್ದಾರೆ. ಪೊಲೀಸರು ಬೆಳಿಗ್ಗೆ 10.00 ಗಂಟೆಗೆ ಸ್ಥಳಕ್ಕೆ ಬಂದಿದ್ದಾರೆ. ಸಾಕ್ಷಿಗೆ ನಿಪಿ-2 ಮಹಜರನ್ನು ತೋರಿಸಲಾಯಿತು. ಸಾಕ್ಷಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು

ಪಾಟೀ ಸವಾಲುಃ - ಆರೋಪಿತರ ಪರ ಶ್ರೀ. ಡಿ ಕೆ ಆರ್ ವಕೀಲರಿಂದಃ-

ನನ್ನ ಮನೆ ಚೂರಿಕಾಡಿನಲ್ಲಿದೆ. ನನ್ನ ಮತ್ತು ಚಾಸಾ-1 ರವರ ಮನೆ 35 ಹೆಜ್ಜೆ ಇಟ್ಟರೆ ತಲುಪಬಹುದು. ಪೊಲೀಸರು ಪಂಚರಾಗಿ ಬನ್ನಿ ಎಂದು ನನಗೆ ನೋಟಿಸ್ ಕೊಟ್ಟಿದ್ದಾರೆ. ಸದರಿ ನೋಟಿಸನ್ನು ಮಹಜರಿಗೆ ಬಂದ ಹಿಂದಿನ ದಿನ ಕೊಟ್ಟಿದ್ದರು. ಸದರಿ ನೋಟಿಸನ್ನು ಬೆಳಿಗ್ಗೆ 9.30 ರಿಂದ 10.00 ಗಂಟೆಯ ಒಳಗೆ ಕೊಟ್ಟಿದ್ದರು. ಮಹಜರಿಗೆ ಒಬ್ಬ ಪೊಲೀಸರು ಬಂದಿದ್ದರು. ಆಗ ಸಮಯ 10.00 ಗಂಟೆ ಆಗಿತ್ತು. ಪೊಲೀಸರು ಬಂದಾಗ ನಾನು ಮತ್ತು ಚಾಸಾ-4 ರವರು ಇದ್ದೆವು. ನಮ್ಮನ್ನು ಹೊರತು ಪಡಿಸಿ ಸ್ಥಳದಲ್ಲಿ ಬೇರೆ ಯಾರೂ

ಇರಲಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಓದಿ ಹೇಳಿರುವುದಿಲ್ಲ, ಆದರೆ ನಾನೇ ಓದಿದ್ದೇನೆ, ಆದರೆ ಈಗ ಮರೆತು ಹೋಗಿದೆ. ಗಲಾಟೆಯಾದ ಸ್ಥಳ ಯಾವುದು ಎಂದು ಮಹಜರಿನಲ್ಲಿ ಬರೆದಿದ್ದಾರೆ. ಸದರಿ ಗಲಾಟೆ ಚಾಸಾ-1 ರವರ ಮನೆಯ ಹತ್ತಿರ ಆಗಿತ್ತು, ಆದರೆ ನಿರ್ದಿಷ್ಟವಾಗಿ ಎಷ್ಟು ಅಡಿ ಅಂತರದಲ್ಲಿ ಸ್ಥಳ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ. ಮಹಜರನ್ನು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಬರೆದಿದ್ದಾರೆ. ಈ ದಿನ ಚಾಸಾ-1 ರವರು ನನ್ನ ಜೊತೆ ಬಂದಿದ್ದಾರೆ. ನಾನು ಚಾಸಾ-1 ರವರ ಒತ್ತಾಯದ ಮೇರೆಗೆ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರು ಮಾಡಲು ನನಗೆ ಯಾವುದೇ ನೋಟಿಸ್ ಕೊಟ್ಟಿರಲಿಲ್ಲ, ಮಹಜರು ಮಾಡುವ ಸ್ಥಳದಲ್ಲಿ ನಾನು ಇರಲಿಲ್ಲ ಹಾಗೂ ನಿಪಿ-2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಆತ್ಮೀಯರು ಎಂದರೆ ಸರಿ. ಚಾಸಾ-1 ಮತ್ತು 1 ನೇ ಆರೋಪಿಗೂ ವೈಷಮ್ಯ ಇದೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ - ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ